# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

# ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆ

# ಚನ್ನರಾಯಪಟ್ಟಣ

ಮಂಜೂರಾತಿ ಆದೇಶದ ಸಂಖ್ಯೆ: ಎಸ್‌ಡಬ್ಲ್ಯೂಎಲ್265 ಎಸ್‌ಪಿಎಚ್81 ಬೆಂಗಳೂರು ದಿನಾಂಕ: 19 ನೇ ಜೂನ್ 1982

| | |
|---|---|
| 2001 ರ ಜನಗಣತಿಯಂತೆ ತಾಲ್ಲೂಕಿನ ಒಟ್ಟು ಜನಸಂಖ್ಯೆ | : 278105 |
| ಗಂಡಸರ ಜನಸಂಖ್ಯೆ | : 137573 |
| ಹೆಂಗಸರ ಜನಸಂಖ್ಯೆ | : 140532 |
| ತಾಲ್ಲೂಕಿನ ಒಟ್ಟು ಪರಿಶಿಷ್ಠ ಜಾತಿ ಜನಸಂಖ್ಯೆ | : 28735 |
| ತಾಲ್ಲೂಕಿನ ಒಟ್ಟು ಪರಿಶಿಷ್ಠ ವರ್ಗದ ಜನಸಂಖ್ಯೆ | : 1863 |
| ತಾಲ್ಲೂಕಿನಲ್ಲಿರುವ ಒಟ್ಟು ಗ್ರಾಮಗಳು | : 375 +10 |
| ತಾಲ್ಲೂಕಿನಲ್ಲಿರುವ ಒಟ್ಟು ಹೋಬಳಿಗಳು | : 6 |
| ತಾಲ್ಲೂಕಿನಲ್ಲಿರುವ ಒಟ್ಟು ಗ್ರಾಮಪಂಚಾಯತಿಗಳ ಸಂಖ್ಯೆ | : 40 |
| ತಾಲ್ಲೂಕಿನ ಒಟ್ಟು ಭೂ ವಿಸ್ತೀರ್ಣ | : 1041 ಚದರ ಕಿ.ಮೀ/ 103464 ಹೆಕ್ಟೆರ್ಸ್ |
| ತಾಲ್ಲೂಕಿನಲ್ಲಿರುವ ಒಟ್ಟು ಕಿರಿಯ ಪ್ರಾಥಮಿಕ ಶಾಲೆಗಳು | : 249 |
| ತಾಲ್ಲೂಕಿನಲ್ಲಿರುವ ಒಟ್ಟು ಹಿರಿಯ ಪ್ರಾಥಮಿಕ ಶಾಲೆಗಳು | : 162 |
| ತಾಲ್ಲೂಕಿನಲ್ಲಿರುವ ಒಟ್ಟು ಪ್ರೌಢ ಶಾಲೆಗಳು | : 51 |
| ತಾಲ್ಲೂಕಿನಲ್ಲಿರುವ ಪದವಿ ಪೂರ್ವ ಕಾಲೇಜುಗಳು | : |
| ತಾಲ್ಲೂಕಿನಲ್ಲಿರುವ ಪದವಿ ಕಾಲೇಜುಗಳು | : 3 |
| **ಆರೋಗ್ಯ ಇಲಾಖೆ** | |
| ತಾಲ್ಲೂಕಿನಲ್ಲಿರುವ ಒಟ್ಟು ಉಪ ಕೇಂದ್ರಗಳು | : 91 |
| ತಾಲ್ಲೂಕಿನಲ್ಲಿರುವ ಒಟ್ಟು ಪ್ರಾಥಮಿಕ ಆರೋಗ್ಯ ಘಟಕಗಳು | : 12 |
| ತಾಲ್ಲೂಕಿನಲ್ಲಿರುವ ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು | : 13 |
| ತಾಲ್ಲೂಕಿನಲ್ಲಿರುವ ಒಟ್ಟು ಸಮುದಾಯ ಆರೋಗ್ಯ ಕೇಂದ್ರಗಳು | : 1 |
| ತಾಲ್ಲೂಕಿನಲ್ಲಿರುವ ಒಟ್ಟು ಸಾರ್ವಜನಿಕ ಆಸ್ಪತ್ರೆಗಳು | : 1 |

**ಮಂಜೂರಾತಿ ಆದೇಶದ ಸಂಖ್ಯೆ: ಎಸ್‌ಡಬ್ಲ್ಯೂಎಲ್265 ಎಸ್‌ಪಿಎಚ್81 ಬೆಂಗಳೂರು ದಿನಾಂಕ: 19 ನೇ ಜೂನ್ 1982**

## ಸಮಗ್ರ ಶಿಶು ಅಭಿವೃದ್ಧಿ ಯೋಜನೆ

### ಉದ್ದೇಶ

1. 0-6 ವರ್ಷದೊಳಗಿನ ಮಕ್ಕಳ ಪೌಷ್ಠಿಕ ಮಟ್ಟವನ್ನು ಹಾಗೂ ಆರೋಗ್ಯ ಸ್ಥಿತಿಯನ್ನು ಸುಧಾರಿಸುವುದು.
2. ಮಗುವಿನ ಮಾನಸಿಕ, ಸಾಮಾಜಿಕ ಮತ್ತು ದೈಹಿಕ ಬೆಳವಣಿಗೆಗೆ ಭದ್ರವಾದ ಬುನಾದಿ ಹಾಕುವುದು.
3. ಶಿಶು ಮರಣ ದರ, ಅಪೌಷ್ಠಿಕತೆ, ಕಾಯಿಲೆ ಪ್ರಮಾಣ ಹಾಗೂ ಮಕ್ಕಳು ಶಾಲೆ ಬಿಡುವ ಪ್ರಮಾಣವನ್ನು ಕಡಿಮೆ ಮಾಡುವುದು.
4. ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಇತರ ಇಲಾಖೆಗಳೊಂದಿಗೆ ಪರಿಣಾಮಕಾರಿಯಾದ ಸಮನ್ವಯತೆಯನ್ನು ಸಾಧಿಸುವುದು.
5. ಪೌಷ್ಠಿಕ ಅಂಶ ಹಾಗೂ ಆರೋಗ್ಯ ಶಿಕ್ಷಣವನ್ನು ನೀಡುವ ಮೂಲಕ ಮಕ್ಕಳ ಸಾಮನ್ಯ ಆರೋಗ್ಯ ಹಾಗೂ ಪೌಷ್ಠಿಕ ಮಟ್ಟವನ್ನು ಕಾಪಾಡುವ ಬಗ್ಗೆ ತಾಯಂದಿರ ಸಾಮರ್ಥ್ಯವನ್ನು ಹೆಚ್ಚಿಸುವುದು.

### ಸೇವೆಗಳು

1. 6 ವರ್ಷದೊಳಗಿನ ಮಕ್ಕಳಿಗೆ, ಗರ್ಭಿಣಿ ಹಾಗೂ ಬಾಣಂತಿಯರಿಗೆ ಪೂರಕ ಪೌಷ್ಠಿಕ ಆಹಾರವನ್ನು ನೀಡುವುದು.
2. ಮಕ್ಕಳಿಗೆ ಹಾಗೂ ತಾಯಂದಿರ ರೋಗ ನಿರೋಧಕ ಚುಚ್ಚುಮದ್ದುಗಳನ್ನು ನೀಡುವುದು.
3. ಆರೋಗ್ಯ ತಪಾಸಣೆ.
4. ಸಲಹಾ ಸೇವೆ.
5. ಮಹಿಳೆಯರಿಗೆ ಆರೋಗ್ಯ ಮತ್ತು ಪೌಷ್ಠಿಕ ಶಿಕ್ಷಣ ನೀಡುವುದು.
6. 3-6 ವರ್ಷದೊಳಗಿನ ಮಕ್ಕಳಿಗೆ ಶಾಲಾ ಪೂರ್ವ ಚಟುವಟಿಕೆಗಳನ್ನು ನಡೆಸುವುದು.

# <u>ಭಾಗ್ಯಲಕ್ಷ್ಮಿ ಯೋಜನೆ</u>

ಸಮಾಜದಲ್ಲಿ ಹೆಣ್ಣು ಮಕ್ಕಳ ಸ್ಥಿತಿಯನ್ನು ಉತ್ತಮಗೊಳಿಸಲು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗು ಜನಿಸಿದಾಗ ಅಂತಹ ಕುಟುಂಬಗಳಿಗೆ ನೈತಿಕ ಸ್ಥೈರ್ಯ ತುಂಬಲು ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

## <u>ಉದ್ದೇಶ</u>

1. ಹೆಣ್ಣು ಮತ್ತು ಗಂಡು ಮಕ್ಕಳಲ್ಲಿನ ಲಿಂಗ ತಾರತಮ್ಯವನ್ನು ಕಡಿಮೆಗೊಳಿಸುವುದು.
2. ಸ್ತ್ರೀ ಸಾಕ್ಷರತೆ ಪ್ರಮಾಣವನ್ನು ಹೆಚ್ಚಿಸುವುದು.
3. ಹೆಣ್ಣು ಭ್ರೂಣಹತ್ಯೆಯನ್ನು ತಡೆಗಟ್ಟುವುದು.
4. ಲಿಂಗಾನುಪಾತವನ್ನು ಸಮಸ್ಥಿತಿಯಲ್ಲಿಡುವುದು.
5. ಹೆಣ್ಣು ಮಕ್ಕಳ ಆರೋಗ್ಯವನ್ನು ಸಂರಕ್ಷಿಸುವುದು.

ದಿನಾಂಕ 01-04-2006 ರ ನಂತರ ದಿನಾಂಕ 01-08-2008 ರ ಒಳಗೆ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.10000/- ಗಳನ್ನು ನಿಶ್ಚಿತ ಠೇವಣಿ ರೂಪದಲ್ಲಿಟ್ಟು 18 ವರ್ಷದ ತರುವಾಯ ರೂ.34751/- ಗಳನ್ನು ಪಾವತಿ ಮಾಡುವುದು.

ದಿನಾಂಕ 01-08-2008 ರ ನಂತರ ಜನಿಸಿದ ಮಗುವಿಗೆ ರೂ.19300/- ಗಳ ನಿಶ್ಚಿತ ಠೇವಣಿ ರೂಪದಲ್ಲಿಟ್ಟು 18 ವರ್ಷದ ತರುವಾಯ ರೂ.100097/- ಗಳನ್ನು ಪಾವತಿ ಮಾಡುವುದು.

ಇದಲ್ಲದೇ 1ನೇ ತರಗತಿಯಿಂದ 12 ನೇ ತರಗತಿಯವರೆಗೆ ವಿದ್ಯಾರ್ಥಿವೇತನ ಹಾಗೂ ತೀವ್ರತರವಾದ ರೋಗಗಳಿಗೆ ತುತ್ತಾದಲ್ಲಿ ಒಂದು ವರ್ಷಕ್ಕೆ ರೂ: ೨೫೦೦೦.೦೦ ಗಳಿಗೆ ಮಿತಿಗೊಳಿಸಿ ವೈದ್ಯಕೀಯ ವೆಚ್ಚದ ಮರುಪಾವತಿಯ ವ್ಯವಸ್ಥೆಯನ್ನು ಮಾಡಲಾಗಿದೆ. ಅದೇ ರೀತಿ ಫಲಾನುಭವಿಯ ಪೋಷಕರು(ತಂದೆ) ಮೃತರಾದಲ್ಲಿ ವಿಮಾ ಸೌಲಭ್ಯವನ್ನು ಕಲ್ಪಿಸಲಾಗಿದೆ.

## ಕಛೇರಿ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

1. ಸಮಗ್ರ ಶಿಶು ಅಭಿವೃದ್ಧಿ ಯೋಜನೆ.
2. ಸ್ತ್ರೀಶಕ್ತಿ ಯೋಜನೆ.
3. ಭಾಗ್ಯಲಕ್ಷ್ಮಿ ಯೋಜನೆ.
4. ನಮ್ಮ ಮಗಳು ನಮ್ಮ ಶಕ್ತಿ ಯೋಜನೆ.
5. ಬಾಲಿಕಾ ಸಮೃದ್ಧಿ ಯೋಜನೆ.
6. ಕಿಶೋರಿ ಶಕ್ತಿ ಯೋಜನೆ.
7. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ.
8. ಬಾಲ್ಯ ವಿವಾಹ ನಿಷೇಧ ಕಾಯ್ದೆ.
9. ಬಾಲ ಕಾರ್ಮಿಕ ನಿಷೇಧ ಕಾಯ್ದೆ.
10. ವರದಕ್ಷಿಣೆ ನಿಷೇಧ ಕಾಯ್ದೆ.
11. ಮಕ್ಕಳ ಮಾರಾಟ ಮತ್ತು ಸಾಗಣೆ ನಿಷೇಧ ಕಾಯ್ದೆ.

## ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದ ಸಹಕಾರದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು.

1. ಉದ್ಯೋಗಿನಿ.
2. ಆಸರೆ.
3. ಇ–ಮಹಿಳೆ.

## ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು.

1. ಅಂಗವಿಕಲ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶಿಷ್ಯ ವೇತನ.
2. ಅಂಗವಿಕಲರಿಗೆ ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ನೀಡುವುದು.
3. ಅಂಗವಿಕಲರಿಗೆ ಸ್ವಾವಲಂಬನೆ ಸಾಧಿಸಲು ಆಧಾರ ಯೋಜನೆಯನ್ವಯ ಸಾಲ ನೀಡಿಕೆ.
4. ಅಂಗವಿಕಲರಿಗೆ ಹಾಗೂ ಹಿರಿಯ ನಾಗರಿಕರಿಗೆ ಗುರ್ತಿನ ಚೀಟಿ ವಿತರಣೆ.

**<u>ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆಯನ್ವಯ ಮಂಜೂರಾಗಿರುವ ಹುದ್ದೆಗಳ ವಿವರ.</u>**

| | | |
|---|---|---|
| 1. ಶಿಶು ಅಭಿವೃದ್ಧಿ ಯೋಜನಾಧಿಕಾರಿ | – | 1 |
| 2. ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ | – | 2 |
| 3. ಮಹಿಳಾ ಮೇಲ್ವಿಚಾರಕರು | – | 14 |
| 4. ಪ್ರಥಮ ದರ್ಜೆ ಸಹಾಯಕರು | – | 3 |
| 5. ಬೆರಳಚ್ಚುಗಾರರು | – | 1 |
| 6. ವಾಹನ ಚಾಲಕರು | – | 1 |
| 7. ಡಿ. ಗ್ರೂಪ್ ನೌಕರರು | – | 1 |
| 8. ಅಂಗನವಾಡಿ ಕಾರ್ಯಕರ್ತೆಯರು | – | 386 |
| 9. ಅಂಗನವಾಡಿ ಸಹಾಯಕಿಯರು | – | 359 |

## <u>ಸ್ತ್ರೀಶಕ್ತಿ ಯೋಜನೆ</u>

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುವುದರೊಂದಿಗೆ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಸುವ ಅಲ್ಲದೇ ಗ್ರಾಮೀಣ ಮಹಿಳೆಯರಲ್ಲಿ ದುಡಿಮೆ ಹಾಗೂ ಉಳಿತಾಯ ಮನೋಭಾವವನ್ನು ಉಂಟು ಮಾಡುವ ಮಹತ್ತರ ಉದ್ದೇಶದಿಂದ ರೂಪಿತವಾದ ಈ ಯೋಜನೆಯು 2000-01 ನೇ ಸಾಲಿನಿಂದ ಜಾರಿಯಲ್ಲಿರುತ್ತದೆ.

1. ತಾಲ್ಲೂಕಿನಲ್ಲಿ ರಚಿತವಾಗಿರುವ ಒಟ್ಟು ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ: 1042
2. ಸದಸ್ಯತ್ವ ಪಡೆದಿರುವ ಒಟ್ಟು ಮಹಿಳೆಯರ ಸಂಖ್ಯೆ:
3. ಸದಸ್ಯತ್ವ ಪಡೆದಿರುವ ಒಟ್ಟು ಪರಿಶಿಷ್ಟ ಜಾತಿ ಮಹಿಳೆಯರ ಸಂಖ್ಯೆ:
4. ಸದಸ್ಯತ್ವ ಪಡೆದಿರುವ ಒಟ್ಟು ಪರಿಶಿಷ್ಟ ವರ್ಗ ಮಹಿಳೆಯರ ಸಂಖ್ಯೆ:
5. ಸದಸ್ಯತ್ವ ಪಡೆದಿರುವ ಒಟ್ಟು ಅಲ್ಪ ಸಂಖ್ಯಾತ ಮಹಿಳೆಯರ ಸಂಖ್ಯೆ:
6. ಈವರೆಗೆ ಸುತ್ತುನಿಧಿ ಪಡೆದಿರುವ ಗುಂಪುಗಳ ಸಂಖ್ಯೆ: 1030
7. ಈವರೆಗೆ ಅಧಿಕ ಉಳಿತಾಯಕ್ಕಾಗಿ ಪ್ರೋತ್ಸಾಹಧನ ಪಡೆದಿರುವ ಗುಂಪುಗಳ ಸಂಖ್ಯೆ: 17
8. ಈವರೆಗೆ ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿರುವ ಗುಂಪುಗಳಿಗೆ ಪ್ರೋತ್ಸಾಹಧನ ಪಡೆದಿರುವ ಗುಂಪುಗಳ ಸಂಖ್ಯೆ: 47

# ಮಕ್ಕಳ ಹಕ್ಕುಗಳು

**ಮಕ್ಕಳ ಬದುಕುವ ಹಕ್ಕು:** ಪ್ರತಿಯೊಂದು ಮಗುವಿಗೂ ಜೀವಿಸುವ ಅವಕಾಶವಿದೆ. ಉತ್ತಮ ಆರೋಗ್ಯ ಸೇವೆ ಮತ್ತು ಪೌಷ್ಠಿಕ ಆಹಾರವನ್ನು ಪಡೆದುಕೊಳ್ಳುವ ಮತ್ತು ತಾನು ಈ ದೇಶದ ಪ್ರಜೆ ಎಂದು ಗುರ್ತಿಸಿಕೊಳ್ಳುವ ಹಕ್ಕು ಇದೆ.

**ಮಕ್ಕಳ ರಕ್ಷಣೆಯ ಹಕ್ಕು:** ಯಾವುದೇ ರೀತಿಯ ಮಾನಸಿಕ ಅಥವಾ ದೈಹಿಕ ಶೋಷಣೆ, ಕಿರುಕುಳ, ಹಿಂಸೆಗಳಿಂದ ತಪ್ಪಿಸುವುದು ಮತ್ತು ಅವುಗಳಿಂದ ಮುಕ್ತಿ ಹಾಗೂ ರಕ್ಷಣೆ ನೀಡುವುದು.

**ಮಕ್ಕಳ ವಿಕಾಸ ಹಕ್ಕು:**ಪ್ರತಿಯೊಂದು ಮಗುವಿಗೂ ನಲಿಯುವ ಮತ್ತು ಕಲಿಯುವ ಹಕ್ಕಿನ ಜೊತೆಗೆ ಅವರುಗಳ ಆರೋಗ್ಯದ ಕಾಳಜಿ ಮತ್ತು ಸಾಮಾಜಿಕ ಭದ್ರತೆಯನ್ನು ನೀಡುತ್ತದೆ. ಹಾಗೆಯೇ ಮಕ್ಕಳ ಮನೋವಿಕಾಸಕ್ಕೆ ನೆರವಾಗುವಂತ ಬೌದ್ಧಿಕ ಮಟ್ಟದ ವೃದ್ಧಿಯನ್ನು ಎತ್ತಿ ಹಿಡಿಯುತ್ತದೆ.

**ಮಕ್ಕಳ ಭಾಗವಹಿಸುವ ಹಕ್ಕು:** ಪ್ರತಿಯೊಂದು ಮಗುವೂ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶ, ತಮ್ಮ ಜೀವನಕ್ಕೆ ಸಂಬಂಧಿಸಿದಂತೆ ಸ್ವತಂತ್ರ ಅಭಿಪ್ರಾಯ ಕೈಗೊಳ್ಳುವ ಅವಕಾಶ ಮಾಡಿಕೊಡುತ್ತದೆ. ಹಾಗೆಯೇ ಸಂಘಟಿತರಾಗುವ ಮತ್ತು ದಾರ್ಮಿಕ ಹಕ್ಕುಗಳನ್ನೂ ಸಹ ನೀಡುತ್ತದೆ.

ಈ ನಾಲ್ಕು ಪ್ರಾಥಮಿಕ ಹಕ್ಕುಗಳು ಮಕ್ಕಳಿಗೆ ದೊರೆತು ಅದರ ಲಾಭ ಪಡೆದುಕೊಳ್ಳುವಂತಾಗಬೇಕಾದರೆ, ಇವುಗಳ ಜೊತೆಗೆ ಇನ್ನೂ ನಾಲ್ಕು ಪ್ರಮುಖ ಅಂಶಗಳಿಗೂ ಅಷ್ಟೇ ಮಹತ್ವ ನೀಡಬೇಕಾಗಿರುತ್ತದೆ.

- ಮಕ್ಕಳ ನಡುವೆ ಯಾವುದೇ ತಾರತಮ್ಯ ಮಾಡಬಾದು. ದೇಶ, ಭಾಷೆ, ರಾಜ್ಯ, ಜಾತಿ, ಲಿಂಗ, ವರ್ಣ, ಧರ್ಮ, ಶಿಕ್ಷಣ, ಅಂಗವಿಕಲತೆ, ಬಡವ–ಬಲ್ಲಿದ ಎನ್ನುವ ಅಂಶಗಳು ಮಕ್ಕಳಿಗೆ ರಕ್ಷಣೆ ನೀಡುವ ನಾಲ್ಕು ಪ್ರಾಥಮಿಕ ಅಂಶಗಳು ಅಡ್ಡಿ ಪಡಿಸುವಂತಿರಬಾರದು.

- ಯಾವುದೇ ಒಂದು ನಿರ್ಣಯವನ್ನು ಕೈಗೊಳ್ಳುವಾಗ ಅದರಿಂದ ಮಕ್ಕಳಿಗೆ ಹೇಗೆ ನೆರವಾಗಲಿದೆ ಮತ್ತು ಅದರಿಂದ ಮಕ್ಕಳಿಗೆ ಎಷ್ಟರ ಮಟ್ಟಿಗೆ ಸಹಕಾರಿಯಾಗಲಿದೆ ಎನ್ನುವ ಅಂಶಗಳನ್ನು ಪರಾಮರ್ಶಿಸಿ ನಿರ್ಧಾರವನ್ನು ಕೈಗೊಳ್ಳಬೇಕು.

- ತಮ್ಮ ಅಭಿಪ್ರಾಯ ಇಲ್ಲವೇ ಅನಿಸಿಕೆಗಳನ್ನು ಮುಕ್ತವಾಗಿ ದೊಡ್ಡವರ ಎದುರು ಹೇಳಿಕೊಳ್ಳಲು ಅವಕಾಶ ಕಲ್ಪಿಸಿ ಕೊಡಬೇಕು. ಜೊತೆಗೆ ಸಮಾಜ ಮತ್ತು ಹಿರಿಯರು ಅದರಂತೆ ನಡೆದುಕೊಳ್ಳಬೇಕು ಎಂದು ಒತ್ತಾಯಿಸುವ ಹಕ್ಕು ಮಕ್ಕಳಿಗಿದೆ.

- ವಿಶ್ವಸಂಸ್ಥೆ ಒಪ್ಪಂದದಲ್ಲಿ ಉಲ್ಲೇಖಿಸಿರುವ ಅಂಶಗಳಿಗಿಂತ ಅತ್ಯುತ್ತಮವಾದ ಮತ್ತು ಮಕ್ಕಳಿಗೆ ಹೆಚ್ಚಿನ ರಕ್ಷಣೆ ಹಾಗೂ ಮಕ್ಕಳ ಪರವಾದ ಕಾನೂನುಗಳಿದ್ದರೆ ಅವುಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕು. ಆದರೆ, ಒಂದು ಪಕ್ಷ ಜಾರಿಯಲ್ಲಿರುವ ಕಾನೂನುಗಳು ಮಕ್ಕಳ ರಕ್ಷಣೆಗೆ ವಿರೋಧವಾಗಿದ್ದರೆ ಅವುಗಳನ್ನು ನಿಬಂಧನೆಗಳ ಅಡಿಯಲ್ಲಿ ತೆಗೆದುಹಾಕಲಾಗಿದೆ ಎಂದೇ ಭಾವಿಸಬೇಕು ಎಂದು ತಿಳಿಸಿದೆ.